© 2018 Udayavani epaper -Vara Prasada -pvvprao@gmail.com -8608012829

ಕೆಲಸ ಮಾಡದ ಅಧಿಕಾರಿಗಳಿಗೆ ನೋಟಿಸ್ ನೀಡಿ

ಜಿಪಂ ಸಿಇಒಗೆ ಅಧ್ಯಕ್ಷೆ ಲತಾ ರವಿಕುಮಾರ್ ಸೂಚನೆ ■ 1.93 ಕೋಟಿ ರೂ. ಸರ್ಕಾರಕ್ಕೆ ವಾಪಸ್

ತುಮಕೂರು: ಅಭಿವೃದ್ಧಿ ಕಾಮಗಾರಿ ನಿಗದಿತ ಸಮಯಕ್ಕೆ ಪೂರ್ಣಗೊಳ್ಳಬೇಕು ಎಂದು ಪ್ರತಿ ಸಭೆಯಲ್ಲಿಯೂ ಸೂಚಿಸುತ್ತೇವೆ ಆದರೂ 1.93 ಕೋಟಿ ರೂ. ಸರ್ಕಾರಕ್ಕೆ ವಾಪಸ್ ಹೋಗಿದೆ ಎಂದು ಅಧಿಕಾರಿಗಳ ಕಾರ್ಯವೈಖರಿಗೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಲತಾ ರವಿಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ, ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದರು. ಕೆಲಸ ಮಾಡದ ಅಧಿಕಾರಿಗಳಿಗೆ ನೋಟಿಸ್ ನೀಡುವಂತೆ ಜಿಪಂ ಸಿಇಒಗೆ ಸೂಚಿಸಿದರು.

ಶುದ್ಧ ನೀರು ಬಳಸಿ: ಅಂಗನವಾಡಿ ಹಾಗೂ ಶಾಲೆಗಳಿಗೆ ಹತ್ತಿರವಿರುವ ಶುದ್ಧ ಕುಡಿಯುವ ನೀರಿನ ಘಟಕದಿಂದ ನೀರು ಪಡೆದು ಬಿಸಿಯೂಟ ತಯಾರಿಸಬೇಕು. ಬಿಸಿಯೂಟ ತಯಾರಿಕೆಗೆ ನೀರಿನ ಸಮಸ್ಯೆಯಿದ್ದರೆ ತಾಪಂ ಅಧಿಕಾರಿಗಳ ಗಮನಕ್ಕೆ ತರಬೇಕು. ಬಿಸಿಯೂಟದ ನಂತರ ಅಡುಗೆ ಕೊಠಡಿ ಹಾಗೂ ಶೌಚಗೃಹ ಸ್ವಚ್ಛಗೊಳಿಸಬೇಕು ಎಂದು ಹೇಳಿದರು.

ಮಲ್ಲಸಂದ್ರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಛಾವಣಿ ಕುಸಿಯುವ ಸ್ಥಿತಿಯಲ್ಲಿದ್ದು, ಕೂಡಲೇ ಸ್ಥಳ ಪರಿಶೀಲಿಸಿ ವರದಿ ನೀಡುವಂತೆ ಡಿಡಿಪಿಐ ಆರ್. ಕಾಮಾಕ್ಷಿಗೆ ಉಪಾಧ್ಯಕ್ಷೆ ಶಾರದ ನರಸಿಂಹಮೂರ್ತಿ ಸೂಚಿಸಿದರು.

ತಾಂತ್ರಿಕ ಕಾರ್ಯಾಗಾರ ತರಬೇತಿ: ಜಿಲ್ಲೆಯಲ್ಲಿ ಒಟ್ಟು 4,200 ಹೆಕ್ಟೇರ್ ವಿಸ್ತೀರ್ಣದಲ್ಲಿ ಬಾಳೆ ಬೆಳೆಯಲಾಗುತ್ತಿದೆ. ಬಾಳೆ ಮಾರುಕಟ್ಟೆ ಪ್ರಾಧಿಕಾರ ಕೃಷಿ ಮಾರುಕಟ್ಟೆ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಈ ಬಗ್ಗೆ ಕ್ರಮವಹಿಸಲು ಮಾರುಕಟ್ಟೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅಲ್ಲದೇ ಪಾಲಿಹೌಸ್ ಘಟಕ ನಿರ್ಮಿಸಿರುವ ಫಲಾನುಭವಿಗಳಿಗೆ ಘಟಕ ಸಮರ್ಪಕವಾಗಿ ಆಧುನಿಕ ತಂತ್ರಜ್ಞಾನ ಬಳಸಿ ಅಧಿಕ ಮೌಲ್ಯದ ಬೆಳೆ ಬೆಳೆಯಲು ಇಲಾಖೆಯಿಂದ ತಾಂತ್ರಿಕ ಕಾರ್ಯಾಗಾರದ ತರಬೇತಿ ನೀಡಲಾಗುತ್ತಿದೆ ಎಂದು ತೋಟ ಗಾರಿಕೆ ಇಲಾಖೆ ಉಪನಿರ್ದೇಶಕ ಬಿ. ರಘು ಮಾಹಿತಿ ನೀಡಿದರು. ಕೃಷಿ ಇಲಾಖೆಯಡಿ ನೀಡುತ್ತಿರುವ ಬೀಜ ವಿತರಣೆಯು ರೈತರಿಗೆ ತಲುಪುವ ಬಗ್ಗೆ ಖುದ್ದು ಪರಿಶೀಲಿಸಬೇಕು. ಗುಣಮಟ್ಟದ ಬೀಜ ವಿತರಿಸಬೇಕು.

ತುಮಕೂರಿನ ಜಿಪಂ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಮಾಸಿಕ ಕೆಡಿಪಿ ಸಭೆಯಲ್ಲಿ ಜಿಪಂ ಸಿಇಒ ಶುಭಾಕಲ್ಯಾಣ್ ಮಾತನಾಡಿದರು.

ಸಿರಿಧಾನ್ಯ ಬೆಳೆಯಲು ಸಹಾಯಧನ: ಕೃಷಿ ಜಂಟಿ ನಿರ್ದೇಶಕ ಜಯಸ್ವಾಮಿ ಮಾತನಾಡಿ, ಈಗಾಗಲೇ 50 ಹೋಬಳಿಗಳಲ್ಲಿ ಗುಣಮಟ್ಟದ ಬೀಜ ವಿತರಿಸಲಾಗಿದೆ. ಈ ಬಾರಿ ಆಗಸ್ಟ್‌ನಲ್ಲಿ ಹೆಚ್ಚು ಮಳೆಯಾಗಿದ್ದು ಕಳೆದ ವರ್ಷಕ್ಕಿಂತ ಬಿತ್ತನೆ ಹೆಚ್ಚಾಗಿದ್ದು, ಮುಂಗಾರು ಹಂಗಾಮಿಗೆ ಒಟ್ಟು 4,17,780 ಹೆಕ್ಟೇರ್ ಪ್ರದೇಶದ ಗುರಿ ಹೊಂದಿದ್ದು, 70,691 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಅಲ್ಲದೇ ಸರ್ಕಾರದಿಂದ ಸಿರಿಧಾನ್ಯ ಬೆಳೆಯಲು ಪ್ರತಿ ಹೆಕ್ಟೇರ್‌ಗೆ 10 ಸಾವಿರ ರೂ.ನಂತೆ ಸಹಾಯಧನ ನೀಡಲಾಗುತ್ತಿದೆ. ಇದರೊಂದಿಗೆ ರಾಗಿ ಬೆಳೆಯುವುದರಿಂದ ಜಾನುವಾರುಗಳಿಗೆ ಮೇವಿನ ಕೊರತೆ ನೀಗಿಸಬಹುದು ಎಂದು ಹೇಳಿದರು.

ಜಿಪಂ ಉಪಾಧ್ಯಕ್ಷೆ ಶಾರದಾ ನರಸಿಂಹಮೂರ್ತಿ ಮಾತನಾಡಿ, ಈಗಾಗಲೇ ಜಿಲ್ಲೆಗೆ ಹೇಮಾವತಿ ನೀರು ಹರಿಸಿದ್ದು, ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವ ಗ್ರಾಮಗಳ ಕೆರೆಗಳಿಗೆ ನೀರು ಹರಿಸುವ ಬಗ್ಗೆ ಪ್ರಶ್ನಿಸಿದರು. ಇದಕ್ಕುತ್ತರಿಸಿದ ಕಾರ್ಯಪಾಲಕ ಎಂಜಿನಿಯರ್, ಜಿಲ್ಲೆಯಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ 115.49 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, 10 ತಾಲೂಕಿನ 771 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಕ್ರಿಯಾ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

5 ಕೆ.ಜಿ ಒಣಮೇವು ವಿತರಣೆ: ಮೇವು ಬ್ಯಾಂಕ್‌ಗಳಲ್ಲಿ ಮೇವು ಸರಬರಾಜು ಮಾಡಲು ಆಯಾ ತಾಲೂಕಿನಲ್ಲಿ ಟೆಂಡರ್ ಕರೆದು ಮೇವು ಸರಬರಾಜು ಮಾಡಲಾಗುತ್ತಿದೆ. ತಾಲೂಕಿನ ಗ್ರಾಮಗಳ ವ್ಯಾಪ್ತಿಯಲ್ಲಿರುವ ಜಾನುವಾರು ಸಂಖ್ಯೆಗಳಿಗನುಣವಾಗಿ ಮೇವು ವಿತರಣಾ ಕಾರ್ಡ್ ವಿತರಿಸಿ ಪ್ರತಿ ಜಾನುವಾರಿಗೆ ಪ್ರತಿ ದಿನಕ್ಕೆ ಕೆ.ಜಿ ಗೆ 2 ರೂ.ನಂತೆ 5 ಕೆ.ಜಿ ಒಣಮೇವು ವಿತರಿಸಲಾಗುತ್ತಿದೆ ಎಂದು ಪಶು ಪಾಲನಾ ಇಲಾಖೆಯ ಉಪ ನಿರ್ದೇಶಕ ಡಾ. ಪ್ರಕಾಶ್ ತಿಳಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವಂತೆ ಹೇಳಿದಾಗ ಇಲಾಖೆಯ ಜಿಲ್ಲಾ ಅಧಿಕಾರಿ ಸುಬ್ರಾನಾಯ್ಕ್ ಮಾತನಾಡಿ, ನಿಯಮದ ಪ್ರಕಾರ 300 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದ್ದು, ಒಂದೊಂದು ವಸತಿ ನಿಲಯಗಳಿಗೆ 5 ವಿದ್ಯಾರ್ಥಿಗಳನ್ನು ಹೆಚ್ಚುವರಿಯಾಗಿ ದಾಖಲಿಸಲಾಗಿದೆ ಎಂದರು. ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷೆ ಡಾ. ನವ್ಯಬಾಬು, ಅಕ್ಕಮಹಾದೇವಿ ಇತರರಿದ್ದರು.

ಮಕ್ಕಳಿಗೆ ಶುದ್ಧ ನೀರು ಕೊಡಿ

ಕಣಕುಪ್ಪೆ ಗ್ರಾಮದಲ್ಲಿ 42 ಮಕ್ಕಳು ಬಿಸಿಯೂಟ ಸೇವಿಸಿ ಅಸ್ವಸ್ಥರಾಗಿದ್ದು, ಅದರ ವರದಿ ಕೂಡಲೇ ನೀಡಬೇಕು. ಇನ್ನೂ ಮುಂದೆ ಜಿಲ್ಲೆಯಲ್ಲಿ ಇಂತಹ ಘಟನೆ ನಡೆಯದಂತೆ ಎಚ್ಚರಿಕೆ ವಹಿಸಬೇಕು. ಮಕ್ಕಳಿಗೆ ಶುದ್ಧ ಕುಡಿಯುವ ನೀರು ನೀಡಬೇಕು. ನೀರಿನ ಘಟಕ ಶಾಲೆಯಲ್ಲಿ ಇಲ್ಲದಿದ್ದರೆ ಬೇರೆ ಕಡೆಯಿಂದ ತರಿಸಿ ನೀಡಬೇಕು ಎಂದು ಜಿಲ್ಲಾ ಪಂಚಾಯತಿ ಅಧ್ಯಕ್ಷೆ ಲತಾ ರವಿಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು.

ತುಮುಲ್‌ನಿಂದ ವಿದ್ಯಾರ್ಥಿ ವೇತನ

ಹುಳಿಯಾರು: ಹಾಲು ಉತ್ಪಾದಕರ ಮಕ್ಕಳು ಎಂಜಿನಿಯರಿಂಗ್ ಓದಿದರೆ 10 ಸಾವಿರ ರೂ, ವೈದ್ಯಕೀಯ ಶಿಕ್ಷಣ ಪಡೆದರೆ 25 ಸಾವಿರ ರೂ. ವಿದ್ಯಾರ್ಥಿ ವೇತನವನ್ನು ಹಾಲು ಒಕ್ಕೂಟದಿಂದ ನೀಡಲಾಗುವುದು ಎಂದು ತುಮುಲು ನಿರ್ದೇಶಕ ಹಳೆಮನೆ ಶಿವನಂಜಪ್ಪ ತಿಳಿಸಿದರು. ಹೋಬಳಿ ಹೊಯ್ಸಳಕಟ್ಟೆ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಸಭೆ ಉದ್ಘಾಟಿಸಿ ಮಾತನಾಡಿದರು. ಹಾಲು ಉತ್ಪಾದಕರು ನಂದಿನಿ ಡೇರಿಗೆ ಹಾಲು ಹಾಕುವುದು ವೈಯಕ್ತಿಯ ಸಬಲತೆಯ ದೃಷ್ಟಿಯಿಂದಲೂ ಒಳಿತು ಎಂದರು. ಹೊಯ್ಸಳಕಟ್ಟೆ ಡೇರಿ ಅಧ್ಯಕ್ಷ ಜಯಲಿಂಗರಾಜು ಮಾತನಾಡಿ, ಸಂಘ ವಾರ್ಷಿಕವಾಗಿ 2.48 ಲಕ್ಷ ರೂ. ನಿವ್ವಳ ಲಾಭಗಳಿಸಿದೆ. ಇದರಲ್ಲಿ 96 ಸಾವಿರ ರೂ ಸದಸ್ಯರಿಗೆ ಬೋನಸ್ ನೀಡಲು ತೀರ್ಮಾನಿಸಲಾಗಿದೆ ಎಂದರು. ತುಮುಲ್ ಸಹಾಯಕ ವ್ಯವಸ್ಥಾಪಕ ಯರಗುಂಟಪ್ಪ, ಧರ್ಮಸ್ಥಳ ಸಂಸ್ಥೆಯ ಲಕ್ಷ್ಮೀ, ಯುವರಾಜ್, ಲಿಂಗಣ್ಣ ಕಾಂತರಾಜು, ಮಲ್ಲೇಶ್ ಮತ್ತಿತರರಿದ್ದರು.

ಬೈಕ್ ಸವಾರ ಸ್ಥಳದಲ್ಲೇ ಸಾವು

ಮಧುಗಿರಿ: ಮಧುಗಿರಿ – ತುಮಕೂರು ರಸ್ತೆಯ ಹುಣಸೇಮರದ ಹಟ್ಟಿಯ ಬಳಿ ಬೊಲೆರೋ ಕಾರಿಗೆ ಡಿಕ್ಕಿ ಹೊಡೆದು ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾಟಯ್ಯ (42) ಮೃತ. ಮಧುಗಿರಿ ಕಡೆಯಿಂದ ಸ್ವಗ್ರಾಮ ಕಾಟಗಾನಹಟ್ಟಿಗೆ ಹೋಗುತ್ತಿದ್ದಾಗ ಅವಘಡ ಸಂಭವಿಸಿದೆ.

ಕಾಲೇಜಿನಲ್ಲಿ ಮೂಲಸೌಕರ್ಯ ಕೊರತೆ

ಮಧುಗಿರಿಯ ಕೋಡ್ಲಾಪುರ ಪಿಯು ಕಾಲೇಜಿಗೆ ಭೇಟಿ ನೀಡಿದ್ದ ವಿಶ್ವ ಮಾನವ ಹಕ್ಕುಗಳ ಸಂಸ್ಥಾಪಕ ಅಧ್ಯಕ್ಷ ಸಿದ್ದಲಿಂಗೇಗೌಡ ಮೂಲಸೌಕರ್ಯ ಪರಿಶೀಲಿಸಿದರು.

ಮಧುಗಿರಿ: ಸರ್ಕಾರದ ನಿರ್ಲಕ್ಷ್ಯದಿಂದ ಗ್ರಾಮೀಣ ಭಾಗದ ಶಾಲಾ–ಕಾಲೇಜಿನಲ್ಲಿ ಮೂಲಸೌಕರ್ಯಗಳು ಮರೀಚಿಕೆಯಾಗಿವೆ ಎಂದು ವಿಶ್ವಮಾನವ ಹಕ್ಕುಗಳ ಸಂಸ್ಥಾಪಕ ಅಧ್ಯಕ್ಷ ಸಿದ್ದಲಿಂಗೇಗೌಡ ಆರೋಪಿಸಿದರು. ಪುರವರ ಹೋಬಳಿಯ ಕೋಡ್ಲಾಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿ ಸೌಲಭ್ಯಗಳ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದರು. ಕಾಲೇಜಿನಲ್ಲಿ ಕುಡಿಯುವ ನೀರು, ಶೌಚಾಲಯ, ಹಾಗೂ ಕೊಠಡಿಗಳು ಸೋರುತ್ತಿದ್ದು ಸರಿಪಡಿಸಲು ಅಧಿಕಾರಿ ಗಳು ಹಾಗೂ ಕಾಲೇಜು ಆಡಳಿತ ಮಂಡಲಿ ವಿಫಲರಾಗಿದೆ. ಕೊಠಡಿಗಳ ಛಾವಣಿ ಬೀಳುವ ಹಂತದಲ್ಲಿದ್ದು, ಶೀಘ್ರ ದುರಸ್ತಿಗೆ ಕ್ರಮ ಕೈಗೊಳ್ಳಲು ಒತ್ತಾಯಿಸಿದರು.

6 ವರ್ಷದ ಹಿಂದೆ ನಿರ್ಮಾಣವಾದ ಕೊಠಡಿಗಳು ಈಗಲೇ ಸೋರುವ ಹಂತ ತಲುಪಿದ್ದು ಕಳಪೆಕಾಮಗಾರಿಯಾಗಿದ್ದು ಲೋಕೋಪಯೋಗಿ ಇಲಾಕೆ ಅಧಿಕಾರಿಯನ್ನು ತರಾಟೆಗೆ ತಗೆದುಕೊಂಡರು.

ಉಪನ್ಯಾಸಕರಾದ ಮಹಲಿಂಗೇಶ್, ರಾಮಪ್ಪ, ತಾಲೂಕಿನ ಸಾಮಾಜಿಕ ಕಾರ್ಯಕರ್ತರಾದ ಹನುಮಂತ ರಾಯಪ್ಪ, ಪುರವರ ರಾಮಚಂದ್ರ, ಮಲ್ಲಿಕಾರ್ಜುನ್, ಗೋಪಾಲರೆಡ್ಡಿ, ಹಳೆ ವಿದ್ಯಾರ್ಥಿಗಳಾದ ಸಿರಾಜ್, ಅನಿಲ್ ಮತ್ತಿತರರು ಇದ್ದರು.

ಸರ್ಕಾರಿ ಸೌಲಭ್ಯ ಮಕ್ಕಳಿಗೆ ತಲುಪಲಿ

ಚಿಕ್ಕನಾಯಕನಹಳ್ಳಿ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ವಸತಿ ನಿಲಯಗಳ ಮೇಲ್ವಿಚಾರಕರ ಸಭೆ ನಡೆಯಿತು.

ಚಿಕ್ಕನಾಯಕನಹಳ್ಳಿ: ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ತಾಲೂಕಿನಲ್ಲಿನ ವಿದ್ಯಾರ್ಥಿಗಳ ವಸತಿ ನಿಲಯಗಳ ವಾರ್ಡನ್‌ಗಳು ಹಾಗೂ ಅಡುಗೆ ಸಿಬ್ಬಂದಿ ಸಭೆ ನಡೆಯಿತು.

ತಾಲೂಕು ಪಂಚಾಯಿತಿ ಅಧ್ಯಕ್ಷೆ ಚೇತನಾ ಗಂಗಾಧರ್ ಮಾತನಾಡಿ, ರಾಜ್ಯದ ವಿವಿಧೆಡೆ ಹಾಸ್ಟೆಲ್‌ಗಳಲ್ಲಿ ಆಹಾರದಲ್ಲಿ ಸಮಸ್ಯೆ, ವಿದ್ಯುತ್ ಅವಘಡಗಳು ಸಂಭವಿಸಿದ್ದು, ತಾಲೂಕಿನ ವಿದ್ಯಾರ್ಥಿಗಳ ವಸತಿ ನಿಲಯಗಳಲ್ಲಿ ಅವಘಡ ಸಂಭವಿಸಿದರೆ ಮೇಲ್ವಿಚಾರಕರೆ ಜವಾಬ್ದಾರಿ. ಯಾವುದೇ ಅವಘಡಗಳು ಸಂಭವಿಸದಂತೆ ಕ್ರಮಕೈಗೊಳ್ಳಬೇಕು. ಸರ್ಕಾರ ನೀಡುವ ಸೌಕರ್ಯಗಳು ಸರಿಯಾಗಿ ಮಕ್ಕಳಿಗೆ ತಲುಪುವಂತಾಗಬೇಕು ಎಂದು ಸೂಚಿಸಿದರು.

ಸಮಾಜ ಕಲ್ಯಾಣ ಇಲಾಖಾಧಿಕಾರಿ ರೇಣುಕದೇವಿ, ತಾಲೂಕಿನಲ್ಲಿನ ಹಾಸ್ಟೆಲ್ ವಾರ್ಡನ್‌ಗಳು, ಅಡುಗೆ ತಯಾರಕರು, ಅಡುಗೆ ಸಹಾಯಕಿಯರು, ವಾಚ್ ಮ್ಯಾನ್ ಇದ್ದರು.

ಸಾಮೂಹಿಕ ಶ್ರಾವಣ ಭಿಕ್ಷಾ ಕಾರ್ಯಕ್ರಮ

ಕೊರಟಗೆರೆ: ಹೊಸದುರ್ಗಾ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಪೀಠಾಧ್ಯಕ್ಷ ಶ್ರೀ ಈಶ್ವರಾನಂದಪುರಿ ಸ್ವಾಮೀಜಿಯಿಂದ ಕೊರಟಗೆರೆ ತಾಲೂಕಿನಲ್ಲಿ ಆ.30ರಂದು ಸಾಮೂಹಿಕ ಶ್ರಾವಣ ಭಿಕ್ಷಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಕುರುಬ ಸಮಾಜದ ಅಧ್ಯಕ್ಷ ಮೈಲಾರಪ್ಪ ತಿಳಿಸಿದ್ದಾರೆ. ಸಮೂಹಿಕ ಶ್ರಾವಣ ಭಿಕ್ಷಾ ಕಾರ್ಯಕ್ರಮದ ಅಂಗವಾಗಿ ತಾಲೂಕಿನ ಎಲ್ಲಾ ಕುರುಬ ಸಮುದಾಯ ಇರುವ ಗ್ರಾಮಗಳಿಗೆ ಆಗಮಿಸಲಿದ್ದು, ಸಮುದಾಯದವರು ಗುರುಗಳಿಗೆ ಸೇವೆ ಸಲ್ಲಿಸುವಂತೆ ಮನವಿ ಮಾಡಿದರು. ತಾಲೂಕಿನ ಕುರುಬರ ಸಂಘದ ಎಲ್ಲಾ ಪದಾಧಿಕಾರಿಗಳು, ನೌಕರರ ಸಂಘ, ಮಹಿಳಾ ಸಂಘ ಹಾಗೂ ಯುವಕ ಸಂಘಗಳ ಪದಾಧಿಕಾರಿಗಳು ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದುಮನವಿಮಾಡಿದ್ದಾರೆ. ಕನಕ ಯುವಕ ಸೇನೆ ಅಧ್ಯಕ್ಷ ರಂಗಧಾಮಯ್ಯ, ಟಿ.ಜಿ. ಲಕ್ಷ್ಮೀಶ್, ಚಿಕ್ಕಹನುಮಯ್ಯ, ರಂಗಯ್ಯ, ನಂಜುಂಡಯ್ಯ ಇತರರಿದ್ದರು.

ಸ್ಮಾರ್ಟ್‌ಸಿಟಿ: ಜರ್ಮನಿ ಜೊತೆ ಒಪ್ಪಂದ

ಜರ್ಮನಿ ಡೆಪ್ಯುಟಿ ಕೌನ್ಸಿಲ್ ಜನರಲ್ ಕರ್ಲ್‌ಫಿಲಿಪ್ ಹ್ಲೆರ್ಡಿಂಗ್ ಅವರನ್ನು ತುಮಕೂರು ಸ್ಮಾರ್ಟ್‌ಸಿಟಿ ಲಿ. ಅಧ್ಯಕ್ಷೆ ಡಾ.ಶಾಲಿನಿ ರಜನೀಶ್ ಗೌರವಿಸಿದರು. ವ್ಯವಸ್ಥಾಪಕ ನಿರ್ದೇಶಕ ಟಿ. ಭೂಬಾಲನ್ ಇತರರಿದ್ದರು.

ತುಮಕೂರು: ಫೆಡರಲ್ ರಿಪಬ್ಲಿಕ್ ಆಫ್ ಜರ್ಮನಿಯೊಂದಿಗೆ ಜ್ಞಾನ ಮತ್ತು ಅನುಭವಗಳ ವಿನಿಮಯದೊಂದಿಗೆ ಅಭಿವೃದ್ಧಿ ಸಾಧಿಸುವ ಸಲುವಾಗಿ ಬುಧವಾರ ಫೆಡರಲ್ ರಿಪಬ್ಲಿಕ್ ಆಫ್ ಜರ್ಮನಿ ಡೆಪ್ಯುಟಿ ಕೌನ್ಸಿಲ್ ಜನರಲ್ ಕರ್ಲ್ ಫಿಲಿಪ್ ಹ್ಲೆರ್ಡಿಂಗ್ ಜೊತೆ ಒಪ್ಪಂದ ಮಾಡಿಕೊಳ್ಳಲಾಯಿತು.

ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಕರ್ಲ್ ಫಿಲಿಪ್ ಹ್ಲೆರ್ಡಿಂಗ್ ಚರ್ಚಿಸಿದರು. ಡಾ.ಶಾಲಿನಿ ರಜನೀಶ್ ಸ್ಮಾರ್ಟ್‌ಸಿಟಿಗಳ ಪರಿಕಲ್ಪನೆ ಮತ್ತು ಉದ್ದೇಶ ವಿವರಿಸಿದರು.

ಸ್ಮಾರ್ಟ್‌ಸಿಟಿ ವ್ಯವಸ್ಥಾಪಕ ನಿರ್ದೇಶಕ ಟಿ. ಭೂಬಾಲನ್ ಮಾತನಾಡಿ, ತುಮಕೂರು ನಗರದ ಸಂಪೂರ್ಣ ಅಭಿವೃದ್ಧಿಯನ್ನು ಎಲ್ಲರ ಸಹಕಾರ ಮತ್ತು ಸಹಯೋಗದೊಂದಿಗೆ ಕೈಗೊಳ್ಳಲು ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು. ಕರ್ಲ್‌ಫಿಲಿಪ್ ಹ್ಲೆರ್ಡಿಂಗ್ ಮಾತನಾಡಿ, ಪ್ರಸ್ತುತ ಇರುವ ಐಟಿಐ, ಪಾಲಿಟೆಕ್ನಿಕ್ ಉನ್ನತೀಕರಣ ಮತ್ತು ಹೊಸ ಐಟಿಐ ಆರಂಭಿಸಿ ಕೌಶಲಾಭಿವೃದ್ಧಿ ಹೆಚ್ಚಿಸಲು ಸಹಕರಿಸುವುದಾಗಿ ತಿಳಿಸಿದರು.

ದ್ವಾರನಕುಂಟೆ ಗ್ರಾಪಂ ಉಪಾಧ್ಯಕ್ಷೆ ಮೀನಾಕ್ಷಿ

ನೂತನ ಉಪಾಧ್ಯಕ್ಷರಾಗಿ ನೇಜಂತಿ ಮೀನಾಕ್ಷಿ ರಾಮಕೃಷ್ಣಯ್ಯ ಅವರಿಗೆ ಸದಸ್ಯರು ಶುಭಕೋರಿದರು.

ಬರಗೂರು: ದ್ವಾರನಕುಂಟೆ ಗ್ರಾಮ ಪಂಚಾಯತಿ ನೂತನ ಉಪಾಧ್ಯಕ್ಷರಾಗಿ ನೇಜಂತಿ ಮೀನಾಕ್ಷಿ ರಾಮಕೃಷ್ಣಯ್ಯ ಅವಿರೋಧವಾಗಿ ಆಯ್ಕೆಯಾದರು.

ಸಿದ್ದಗಂಗಮ್ಮ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಚುನಾವಣಾಧಿಕಾರಿ ತಹಸೀಲ್ದಾರ್ ನಾಹೀದಾ ಸಮಕ್ಷಮದಲ್ಲಿ ಬುಧವಾರ ಚುನಾವಣೆ ನಡೆಯಿತು. 15.ಸದಸ್ಯ ಬಲದ ಪಂಚಾಯತಿಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಯಾರು ನಾಮಪತ್ರ ಸಲ್ಲಿಸದೆ ಮೀನಾಕ್ಷಿ ಮಾತ್ರ ನಾಮ ಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆ ಘೋಷಣೆಯಾಯಿತು.

ಅಧ್ಯಕ್ಷೆ ನರಸಿಂಹಯ್ಯ, ಸದಸ್ಯರಾದ ತಿಪ್ಪೇಶ್‌ಗೌಡ, ಶಿವಲಿಂಗಪ್ಪ, ಜಯರಾಮೇಗೌಡ, ರಂಗನಾಥ್, ಜಯಮ್ಮ ಕೃಷ್ಣಮೂರ್ತಿ, ಮಮತ, ಭಾಗ್ಯಮ್ಮ, ಮಂಜುಳಾ, ಪಿಡಿಒ ಸೀಬಿ ರಂಗಯ್ಯ, ಮುಖಂಡ ಬಾಲೇಗೌಡ, ಕೃಷ್ಣಮೂರ್ತಿ ಇತರರಿದ್ದರು.

PUBLIC NOTICE

This is to inform to the general public that my client Mr. SALAHUDDIN KHAN, S/o Hassan Ali Khan, aged about 48 years, R/at No.35, Green Land Layout, Bellahalli Cross, Yelahanka, Bangalore-64. Is intended to purchase and have entered into the agreement of sale dated 22/08/2019 in respect of the converted schedule property bearing Sy No.4, situated at Chikkabettahalli Village, Yelahanka Hobli, Bangalore North Taluk, measuring to an extent 0-04.04 Guntas vide conversion order bearing No.ALN(NAY) SR/63/17-18 dated 26.02.2018 by the order of Deputy Commissioner Bangalore

If any persons having any claim, right, title and interest, whatsoever over the schedule property may forward their objections to the undersigned in writing with supporting documents of your such claims, within 15 days from the date of publication of this notice.

SCHEDULE

All that piece & parcel of Sy No.4, situated at Chikkabettahalli Village, Yelahanka Hobli, Bangalore North Taluk, measuring to an extent of 0-04.04 Guntas bounded on: East by : HMT Layout, West by : Chikkabettahalli Road, North by : Property belongs to Mrs Sudha Rao W/o late A.P.Rao, South by : Property belongs to Mr.Seetharam Rao.

ARUN KUMAR H. C, Advocate
AN LAW ASSOCIATES, No. 24, 1st Floor, Kuvempu Main Road, Hebbala, kempapura Bangalore-560024, Mobile: 9480773124.

ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಪ.ವಿ6/ಬಿ.ಎ/ಡಿಸಿ/2018-19

ಕುಲಸಚಿವರು (ಮೌ)ರವರ ಕಛೇರಿ
ಪರೀಕ್ಷಾ ಭವನ, ಜ್ಞಾನಭಾರತಿ ಆವರಣ,
ಬೆಂಗಳೂರು – 560056.
ದಿನಾಂಕ : 15-05-2019

ಪ್ರಕಟಣೆ

ಶ್ರೀಮತಿ/ಶ್ರೀ ಶಾಂತಮ್ಮ ಕೆ. ರವರು ಅರ್ಜಿಯನ್ನು ಸಲ್ಲಿಸಿ ಬಿ.ಎ. (ಬ್ಯಾಚುಲರ್ ಆಫ್ ಆರ್ಟ್ಸ್) ನೊಂದಣಿ ಸಂಖ್ಯೆ : **09AUA40202** ವರ್ಷ ಮೇ - 2012ರಲ್ಲಿ ಮೂಲ ಪದವಿ ಪ್ರಮಾಣ ಪತ್ರವನ್ನು ಪಡೆಯಲಾಗಿತ್ತು. ಈ ಪದವಿ ಪ್ರಮಾಣ ಪತ್ರವನ್ನು ಕಳೆದು ಕೊಂಡಿರುತ್ತೇನೆಂದು ತಿಳಿಸಿರುತ್ತಾರೆ.

ಮೇಲೆ ತಿಳಿಸಿದ ಕಾರಣದಿಂದ ಬಿ.ಎ (ಬ್ಯಾಚುಲರ್ ಆಫ್ ಆರ್ಟ್ಸ್) ನಕಲು ಪದವಿ ಪ್ರಮಾಣ ಪತ್ರ ನೀಡಲು ಅರ್ಜಿಯನ್ನು ಮೇಲಾಧಿಕಾರಿಗಳ ಅನುಮೋದನೆಗಾಗಿ ಮಂಡಿಸಲಾಗುತ್ತಿದೆ.

ಈ ಮಧ್ಯೆ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ, ಸದರಿ ಪದವಿ ಪ್ರಮಾಣ ಪತ್ರವು ತಮಗೇನಾದರೂ ಸಿಕ್ಕಲ್ಲಿ, ವಿನಂತಿಸುವುದೇನೆಂದರೆ ಕುಲಸಚಿವರು (ಮೌ), ಪರೀಕ್ಷಾ ಭವನ, ಬೆಂಗಳೂರು ವಿಶ್ವವಿದ್ಯಾಲಯ, ಗಾಂಧಿಭವನ ರಸ್ತೆ, ಜ್ಞಾನಭಾರತಿ, ಬೆಂಗಳೂರು – 560056 ಇವರಿಗೆ ಈ ಪತ್ರಿಕಾ ಪ್ರಕಟಣೆಯ ನಂತರ 15 ದಿನಗಳೊಳಗೆ ಕಳುಹಿಸಲು ಕೋರಲಾಗಿದೆ.

ಮೇಲ್ಕಂಡ ಹೆಸರಿನ ಮತ್ತು ನೊಂದಣಿ ಸಂಖ್ಯೆಯ ಪದವಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರ ಶಿಫಾರಸ್ಸಿನ ಆಧಾರದ ಮೇಲೆ ವಿತರಿಸಲಾಗುವುದು. ಈ ಹಿಂದೆ ಮೇಲೆ ನಮೂದಿಸಿರುವ ಮೂಲ ಪದವಿ ಪ್ರಮಾಣ ಪತ್ರವು ತಂತಾನೆ ರದ್ದಾಗುತ್ತದೆ ಮತ್ತು ಇದಕ್ಕೆ ಕಾನೂನಿನ ಬಲವಿಲ್ಲದಾಗುತ್ತದೆಂದು ಪ್ರಕಟಿಸಲಾಗಿದೆ.

ಆದೇಶದ ಮೇರೆಗೆ,
ಸಹಿ/- ಕುಲಸಚಿವರು (ಮೌ)

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೆಳಗಿನ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರಾದ ಶ್ರೀ.ವಿಜಯರಾಜು.ಹೆಚ್.ಪಿ ಬಿನ್ ಶ್ರೀ.ಪ್ರಭಾಕರ ರಾಜು ಹಾಗೂ ಶ್ರೀಮತಿ.ಪ್ರಗತಿ.ಎಂ.ಎಸ್, ಕೋಂ ಶ್ರೀ.ವಿಜಯರಾಜು.ಹೆಚ್.ವಿ ಇವರು ನಿವೇಶನವನ್ನು ಕೊಂಡುಕೊಳ್ಳುವ ಉದ್ದೇಶದಿಂದ ಬೆಂಗಳೂರು-57, ಟಿ.ದಾಸರಹಳ್ಳಿ, 1ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಚಿಕ್ ಪೋಸ್ಟ್ ಹಿಂಬಾಗ, 252ನೇ ಸಂಖ್ಯೆಯ ಮನೆಯಲ್ಲಿ ವಾಸವಾಗಿರುವ ಲೇಟ್. ಚಿಕ್ಕಾಅಂಜಿನಪ್ಪ ರವರ ಮಗ ಸಿ.ಮುನಿಆಂಜನಪ್ಪ ಹಾಗೂ ಇವರ ಧರ್ಮಪತ್ನಿ ಶ್ರೀಮತಿ.ಶಕುಂತಲ.ಕೆ, ಇವರ ಮಕ್ಕಳುಗಳಾದ ಶ್ರೀ.ಎಂ.ವಿನಯ್, ಎಂ.ಶ್ರೀಧರ್, ಶ್ರೀ.ಎಂ.ನವೀನ್ ಕುಮಾರ್ ಎಂಬುವವರೊಡನೆ ಕ್ರಯದ ಪ್ರಕ್ರಿಯೆಯನ್ನು ಮಾಡಿಕೊಳ್ಳಲು ಇಚ್ಛಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿಗೆ ಸಂಬಂದಿಸಿದಂತೆ ಯಾವುದೇ ವ್ಯಕ್ತಿಗಳು ಯಾವುದೇ ಹಕ್ಕನ್ನು ಅಥವಾ ಆಸಕ್ತಿಗಳನ್ನು, ಸ್ವಾಧೀನದ ಹಕ್ಕು, ಮೈನರ್ ಹಕ್ಕು, ಒಟ್ಟು ಕುಟುಂಬದ ಆಸ್ತಿಯ ಹಕ್ಕು ಅಥವಾ ಯಾವುದೇ ಟೈಟಲ್, ಹಿತಾಸಕ್ತಿ ಹೊಂದಿದ್ದಲ್ಲಿ, ಅಥವಾ ಯಾವುದೇ ರೀತಿಯ ಹಕ್ಕನ್ನು ಹೊಂದಿದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ ಹತ್ತು (10) ದಿನಗಳ ಒಳಗೆ ಬೆಂಬಲಾರ್ಹವಾದ ಅಥವಾ ನಂಬಲರ್ಹವಾದ ಎಲ್ಲಾ ದಾಖಲೆ ಕಾಗದ ಪತ್ರಗಳ ಪುರಾವೆಯೊಡನೆ ಲಿಖಿತ ರೂಪದಲ್ಲಿ ಆಕ್ಷೇಪಣೆಗಳನ್ನು ಮತ್ತು ಹಕ್ಕುಗಳನ್ನು ಕೆಳಗೆ ಸಹಿ ಮಾಡಿರುವವರಿಗೆ ಖುದ್ದಾಗಿ ಸಲ್ಲಿಸತಕ್ಕದ್ದು. ಇಲ್ಲದಿದ್ದರೆ ಈ ಸಂಬಂಧ ಯಾವುದೇ ಹಕ್ಕು ಬಾಧ್ಯತೆಗಳು ಇರುವುದಿಲ್ಲ ಎಂದು ತಿಳಿದು ಮಾರಾಟದ ಪ್ರಕ್ರಿಯೆ ಹಾಗೂ ಕ್ರಯದ ಮುಂದುವರೆದ ಕ್ರಮಗಳನ್ನು ನನ್ನ ಕಕ್ಷಿದಾರರು ಮುಂದುವರಿಸುವರು.

ಷೆಡ್ಯೂಲ್ ಸ್ವತ್ತು

ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ನಾಗಸಂದ್ರ ಗ್ರಾಮದ ಸರ್ವೆ ಸಂಖ್ಯೆ: 40ರಲ್ಲಿ 1 ಎಕರೆ 11 ಗುಂಟೆ ಜಮೀನನ್ನು ದಿನಾಂಕ: 29.04.1994 ರಂದು ಜಿಲ್ಲಾಧಿಕಾರಿಗಳು (ಕಂದಾಯ) ಬೆಂಗಳೂರು ಜಿಲ್ಲೆ, ಬೆಂಗಳೂರು, ಇವರಿಂದ ಬಿಡಿಸ್.ಎ.ಎಲ್.ಎನ್. ಎಸ್.ಆರ್(ಎನ್) 149/1993-94 ನೇ ಸಂಖ್ಯೆಯಾಗಿ ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆಗೊಳಿಸಿ ವಿಂಗಡಿಸಿರುವ ನಿವೇಶನಗಳ ಪೈಕಿ, ಈ ಹಿಂದೆ ದಾಸರಹಳ್ಳಿ ನಗರಸಭೆಯ 18ನೇ ವಾಡಿನ ವ್ಯಾಪ್ತಿಗೆ ಒಳಪಟ್ಟಿದ್ದು, ಹಾಲೀ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಾಲಯ, ಪೀಣ್ಯ ಕೈಗಾರಿಕಾ ಪ್ರದೇಶ ಉಪವಲಯ, ಚೊಕ್ಕಸಂದ್ರ 39ನೇ ವಾರ್ಡಿನ ವ್ಯಾಪ್ತಿಗೆ ಒಳಪಟ್ಟಿರುವ ರುಕ್ಮಿಣಿನಗರಕ್ಕೆ ಸೇರಿದ 25ನೇ ಸಂಖ್ಯೆಯ ಖಾಲಿನಿವೇಶಕ್ಕೆ ಚಕ್ಕುಬಂದಿ: **ಪೂರ್ವಕ್ಕೆ:** 12ನೇ ನಂಬರ್ ನಿವೇಶನ, **ಪಶ್ಚಿಮಕ್ಕೆ:** 26ನೇ ನಂಬರ್ ನಿವೇಶನ, **ಉತ್ತರಕ್ಕೆ:** ಬೇರೆಯವರ ಸ್ವತ್ತು, **ದಕ್ಷಿಣಕ್ಕೆ:** 20 ಅಡಿ ರಸ್ತೆ, ಈ ಮಧ್ಯೆ ಇರುವ ಪೂರ್ವ ಪಶ್ಚಿಮ: 30-00 ಅಡಿ ಉತ್ತರ ದಕ್ಷಿಣ: 40-00 ಅಡಿ ಒಟ್ಟು 1200 ಚದರ ಅಡಿಗಳುಳ್ಳ ಅಳತೆಯ ಖಾಲಿ ನಿವೇಶನ ಕ್ರಯದ ವ್ಯವಹಾರಕ್ಕೆ ಸೇರಿದ್ದಾಗಿರುತ್ತದೆ.

ವಿ.ಜಿ.ಮಂಜುನಾಥ್, ವಕೀಲರು
ನಂ.58/1, ಒಂದನೇ ಮಹಡಿ, ಟಿ.ದಾಸರಹಳ್ಳಿ, ಗಣೇಶ ಸರ್ಮಿಲ್ ರಸ್ತೆ, ತುಮಕೂರು ಮುಖ್ಯರಸ್ತೆ, ಬೆಂಗಳೂರು-57.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ, 5ನೇ ಮಹಡಿ, ಬೆಂಗಳೂರು – 11.

ಸಂಖ್ಯೆ : ಕಾಸಬೆಂ/ತಾಶಾ/ಸ.ಇ–1/ಟೆಂಡರ್–10/2019–20 ದಿನಾಂಕ : 27.08.2019

ಟೆಂಡರ್ ಮುಂದೂಡಿಕೆ

ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: 10/2019–20 ದಿನಾಂಕ: 20.07.2019 ಲೆಕ್ಕಶೀರ್ಷಿಕೆ 4702–00–101–3–01–139 ಏತ ನೀರಾವರಿ ಯೋಜನೆ–ಪ್ರಧಾನ ಕಾಮಗಾರಿಗಳು ರಲ್ಲಿ ಆಹ್ವಾನಿಸಲಾಗಿದ್ದ, ರಾಮನಗರ ಜಿಲ್ಲೆ, ಕಾಮಗಾರಿಗಳನ್ನು ಅನಿವಾರ್ಯ ತಾಂತ್ರಿಕ ಕಾರಣಗಳಿಂದ ಟೆಂಡರನ್ನು ಮುಂದೂಡಲಾಗಿದ್ದು, ಈ ಕಾಮಗಾರಿಗಳ ದಿನಾಂಕಗಳು ಈ ಕೆಳಕಂಡಂತಿರುತ್ತದೆ, ಬದಲಾವಣೆ ಇದ್ದಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು.

1. ಟೆಂಡರ್ ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ **ದಿನಾಂಕ: 25.09.2019ರ ಸಂಜೆ 16.30 ಗಂಟೆಯ** ವರೆಗೆ ಪಡೆಯಬಹುದಾಗಿದೆ.
2. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **ದಿನಾಂಕ: 26.09.2019ರ ಸಂಜೆ 16.30 ಗಂಟೆಯವರೆಗೆ** ಸಲ್ಲಿಸಬಹುದಾಗಿದ್ದು ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.
3. ತಾಂತ್ರಿಕ ಬಿಡ್ಡನ್ನು ತೆರೆಯುವ **ದಿನಾಂಕ: 30.09.2019 ಬೆಳಿಗ್ಗೆ 11.30ಕ್ಕೆ.**
4. ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 08.10.2019** ಅರ್ಹ ಗುತ್ತಿಗೆದಾರರಿಗೆ ತಿಳಿಸಲಾಗುವುದು.

ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ **https://www.eproc.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,

DIPR/DDU/1086/2019-20

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ, 5ನೇ ಮಹಡಿ, ಬೆಂಗಳೂರು – 11.

ಸಂಖ್ಯೆ : ಕಾಸಬೆಂ/ತಾಶಾ/ಪಿಬಿ/ಟೆಂಡರ್–13/2019–20 ದಿನಾಂಕ : 27.08.2019

ಟೆಂಡರ್ ಮುಂದೂಡಿಕೆ

ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: 13/2019–20 ದಿನಾಂಕ: 07.08.2019 ಲೆಕ್ಕಶೀರ್ಷಿಕೆ 4707–ಕೆರೆಗಳ ಆಧುನೀಕರಣ–ಪ್ರಧಾನ ಕಾಮಗಾರಿಗಳು, ಆಣೆಕಟ್ಟು ಮತ್ತು ಪಿಕಪ್–ಪ್ರಧಾನ ಕಾಮಗಾರಿಗಳು ರಲ್ಲಿ ಆಹ್ವಾನಿಸಲಾಗಿದ್ದ, ರಾಮನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಬೆಂಗಳೂರು ನಗರ ಜಿಲ್ಲೆಯ ಕಾಮಗಾರಿಗಳನ್ನು ಅನಿವಾರ್ಯ ತಾಂತ್ರಿಕ ಕಾರಣಗಳಿಂದ ಟೆಂಡರನ್ನು ಮುಂದೂಡಲಾಗಿದ್ದು, ಈವರೆಗೆ **E-Proc** ನಲ್ಲಿ ಪ್ರಕಟವಾಗಿರುವ ಕಾಮಗಾರಿಯ ಹೊರತುಪಡಿಸಿ, ಉಳಿದ ಕಾಮಗಾರಿಗಳ ದಿನಾಂಕಗಳು ಈ ಕೆಳಕಂಡಂತಿರುತ್ತದೆ, ಬದಲಾವಣೆ ಇದ್ದಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು.

1. ಟೆಂಡರ್ ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ **ದಿನಾಂಕ: 26.09.2019ರ ಸಂಜೆ 16.30 ಗಂಟೆಯ ವರೆಗೆ** ಪಡೆಯಬಹುದಾಗಿದೆ.
2. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **ದಿನಾಂಕ: 27.09.2019ರ ಸಂಜೆ 16.30 ಗಂಟೆಯವರೆಗೆ** ಸಲ್ಲಿಸಬಹುದಾಗಿದ್ದು ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.
3. ತಾಂತ್ರಿಕ ಬಿಡ್ಡನ್ನು ತೆರೆಯುವ **ದಿನಾಂಕ: 30.09.2019 ಬೆಳಿಗ್ಗೆ 11.30ಕ್ಕೆ** ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: ಅರ್ಹ ಗುತ್ತಿಗೆದಾರರಿಗೆ ತಿಳಿಸುವಲಾಗುವುದು.

ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ **https://www.eproc.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,

DIPR/DDU/1088/2019-20

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ

ಸಂಖ್ಯೆ ಗಾಕುನೀ&ನೈವಿ/ಬೆಳಗಾವಿ/ಪಿಬಿ/WPP(O&M)/ಟೆಂಡರ್–09/2019–20/1218 ದಿನಾಂಕ: 28–08–2019

ಮರು ಟೆಂಡರ್ ಪ್ರಕಟಣೆ

ಉಲ್ಲೇಖ:ಗಾಕುನೀ&ನೈವಿ/ಬೆಳಗಾವಿ/ಪಿಬಿ/WPP(O&M)/ಟೆಂಡರ್–27/2018–19 /2826 ದಿನಾಂಕ: 02–03–2019

ಮೇಲಿನ ಉಲ್ಲೇಖ(1) ರಡಿ ಈ ಕಚೇರಿ ಟೆಂಡರ ಪ್ರಕಟಣೆಯಲ್ಲಿ ಪ್ರಕಟಿಸಲಾದ ಈ ಕೆಳಗಿನ ಕಾಮಗಾರಿಗಳಿಗೆ ಮರು ಟೆಂಡರ್ ಅಹ್ವಾನಿಸಲಾಗಿದೆ.

Sl. No:1: Name of work:Package-3: Operation and Maintenance of water purification plants of Capacity 500 LPH, 1000LPH and above 1000LPH for a period of Five years in habitations of Bailhongal Taluka (47 Nos.) and Saundatti Taluka (55 Nos.) Total 102 Nos in Belagavi District. (Indent No.16754/call-2),EMD Rs in lakhs:0.73, Period of Completion: 5 Years.

01)ಟೆಂಡರ ಪೂರ್ವಬಾವಿ ಸಭೆ ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಗ್ರಾ ಕು ನೀ & ನೈ ಇಲಾಖೆ ಬೆಳಗಾವಿ., ಇವರ ಕಚೇರಿಯಲ್ಲಿ :– ದಿನಾಂಕ: 03–09–2019 ಬೆಳ್ಳಿಗೆ 11.00 ಗಂಟೆಗೆ. 02)ಇ–ಪ್ರೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:09–09–2019 ಸಾಯಂಕಾಲ 16.00 ಗಂಟೆವರೆಗೆ.03)ಇ–ಪ್ರೊಕ್ಯೂರಮೆಂಟ್ ತಾಂತಿಕ ಬಿಡ್ಡನ್ನು ತೆರೆಯುವ ದಿನಾಂಕ :– 11–09–2019 ಸಾಯಂಕಾಲ 16.31 ಗಂಟೆ ನಂತರ.04)ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ:– ತಾಂತಿಕ ಬಿಡ್ ಅನುಮೋದಿಸಿದ ನಂತರ

ಸೂಚನೆ:– ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ e-Procurement portal www.eproc.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಗ್ರಾ. ಕು. ನೀ. & ನೈ. ವಿಭಾಗ, ಬೆಳಗಾವಿ.

DIPR/BGM/RO-NO-542/MCA/2019-20

WANTED FOR QATAR - SEMI GOVT. COMPANY

- KITCHEN EQUIPMENT TECHNICIAN
- CHILLER TECHNICIAN
- BANQUET HELPER
- KITCHEN HELPER
- THERAPEUTIC SERVICES SUPERVISOR
- ASST. WAITERS & STEWARDS
- SPORTS AND RECREATION COORDINATOR
- ASST.COOKS
- LIFEGUARD

ATTRACTIVE SALARY + FREE FOOD & ACCOMMODATION

Email your CV's if you wish to attend the Interview.
We will send call letter & conform your interview date.

MENA SUPPORT SERVICE LTD.
C-16, 2nd Floor, Maximus Commercial Complex, Light House Hill Road, Mangalore-1
Ph. 0824-4258896/2972297Mob: 9036208896 9632544495
Email: menamangalore@gmail.com Lic: B:0932/MUM/COM/1000+/5/9345/2018 Approved by Ministry of external affairs govt. of india

NEW MANGALORE PORT TRUST
ESTABLISHMENT AND RECRUITMENT SECTION
Panambur, Mangaluru - 575010

No.3/20/2019/ERS.2 **INVITES** Date: 26.08.2019

Applications are invited for the following post by Direct Recruitment:-

Sl. No.	Name of the Post	Scale of pay	No. of Posts	Category reserved to
1	Deputy Traffic Manager	24900-50500	01	UR
2	PA to HOD	16400-40500	01	SC

The details of qualification, age, experience, application format etc. and other conditions are available at website **www.newmangaloreport.gov.in**. Applications with copies of certificates should reach the Secretary, New Mangalore Port Trust, Panambur, Mangalore - 575010, Karnataka on or before **08.10.2019**.

Sd/- Secretary

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಅಇಂವಿ/ಕಾನಿಇಂವಿ(ಕ)/ಸಕಾನಿಇಂ–1/ಪ್ರ(ಕಾ&ನಿ)/ಮೈ/19-20/3391-94 & 3395-98 ದಿನಾಂಕ: 21.08.2019

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು, ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

1) ವಿ.ಸಂ. ಅಇಂವಿ/ಕಾನಿಇಂವಿ(ಕ)/ಸಕಾನಿಇಂ–1/ಪ್ರ(ಕಾ&ನಿ)/ಮೈಸೂರು/19–20/ **ಮಾರ್ಗ–01 ರ ಅನ್ವಯ ಸಂಯುಕ್ತ ಪ್ಯಾಕೇಜ್ ಕಾಮಗಾರಿಗಳಾದ** (ಎ) ಚಾಮರಾಜ ನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕಿನ ಹಾಲಿ ಇರುವ 66ಕೆವಿ ಕೌದಳ್ಳಿ–ಮಾರ್ಟಳ್ಳಿ ಟ್ಯಾಪ್ ಮಾರ್ಗದಿಂದ ಹಾಲಿ ಇರುವ 66/11ಕೆವಿ ರಾಮಾಪುರ ಉಪ ಕೇಂದ್ರದವರೆಗೆ ಲಿಲೋ ವ್ಯವಸ್ಥೆಗೊಳಿಸಲು 66/11ಕೆವಿ ರಾಮಾಪುರ ಉಪ ಕೇಂದ್ರದಲ್ಲಿ ಒಂದು ಸಂಖ್ಯೆಯ 66ಕೆವಿ ಟರ್ಮಿನಲ್ ಬೇ ನಿರ್ಮಾಣ. (ಬಿ) ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕಿನ ಹಾಲಿ ಇರುವ 66ಕೆವಿ ಕೊಳ್ಳೇಗಾಲ–ಡಿ.ಆರ್. ಪೇಟೆ ಎಸ್‌ಸಿ ಮಾರ್ಗದಿಂದ ಹಾಲಿ ಇರುವ 66/11ಕೆವಿ ಸಂತೇಮಾರನ ಹಳ್ಳಿ ಉಪ ಕೇಂದ್ರದವರೆಗೆ ಲಿಲೋ ವ್ಯವಸ್ಥೆಗೊಳಿಸುವ ಬಗ್ಗೆ.

2) ವಿ.ಸಂ. ಅಇಂವಿ/ಕಾನಿಇಂವಿ(ಕ)/ಸಕಾನಿಇಂ–1/ಪ್ರ(ಕಾ&ನಿ)/ಮೈಸೂರು/**ಹೆಚ್ಚುವರಿ/18** ರ ಅನ್ವಯ ಮೈಸೂರು ಜಿಲ್ಲೆ ಮತ್ತು ತಾಲ್ಲೂಕಿನ 66/11ಕೆವಿ ಬೋಗಾದಿ ಉಪ ಕೇಂದ್ರಕ್ಕೆ ಸ್ಪೇರ್ 1x20ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕ ಒದಗಿಸುವ ಬಗ್ಗೆ.

ಕಾಮಗಾರಿಯ ಬಗ್ಗೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://eproc.karnataka.gov.in** ನಲ್ಲಿ ದಿನಾಂಕ: **30.08.2019 ರಂದು** ಅಥವಾ ತದನಂತರ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಚೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/- ಅಧೀಕ್ಷಕ ಇಂಜಿನಿಯರ್ (ವಿದ್ಯುತ್), ಪ್ರಸರಣ (ಕಾ ಮತ್ತು ನಿ) ವೃತ್ತ,
ಕವಿಪ್ರನಿನಿ, 1ನೇ ಮಹಡಿ, ಪ್ರಸರಣ ಭವನ, ಎಫ್‌ಟಿಎಸ್ ಕಾಂಪೌಂಡ್, ಎನ್.ಆರ್. ಮೊಹಲ್ಲ,
ಮೈಸೂರು–570 007. ಫೋನ್: 0821–2455018, ಫ್ಯಾಕ್ಸ್: 0821–2457019

ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 13/2019–20, ದಿನಾಂಕ: 19.08.2019

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-1ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲಕ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ-ಪ್ರೊಕ್ಯೂರ್‌ಮೆಂಟ್ ಏಕ ಲಕೋಟೆ (Single) ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ ವಿವಿಧ ಲೆಕ್ಕಶೀರ್ಷಿಗಳಡಿಯ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ್ದು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಸರ್ಕಾರದಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ ಇ-ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸಲು ಹಾಗೂ ಷೆಡ್ಯೂಲ್-ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: **06.09.2019ರ ಸಂಜೆ 16.00ರ ವರೆಗೆ.** (2) ಟೆಂಡರುಗಳನ್ನು ತೆರೆಯುವ ದಿನಾಂಕ: **07.09.2019 ರಂದು ಸಂಜೆ 16.30 ಗಂಟೆಯ ನಂತರ.** (3) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವಿಲ್ಲ): ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ

ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/ಆರ್.ಒ.ಸಂಖ್ಯೆ 320/ಎಂಸಿಎ/2019–20